ಕ್ರಿ:ಮಿಸ್:ನಂ. *270/2022*

ಪಿ.ಡಬ್ಲ್ಯೂ-1

**ದಿ:21-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಎದುರುದಾರರ ಪರ ಶ್ರೀ. ಜಿ .ಎಸ್.ಸಿ. ವಕೀಲರಿಂದ.**

ನಾನು ಬೀರೂರಿನಲ್ಲಿ ಒಂದು ವರ್ಷದಿಂದ ವಾಸವಾಗಿದ್ದೇನೆ. ಬೀರೂರಿನಲ್ಲಿ ನನ್ನ ಹೆಸರಿನಲ್ಲಿರುವ ಒಂದು ನಿವೇಶನ ಇದೆ. ಬೀರೂರಿನಲ್ಲಿ ನನಗ ಸೇರಿರುವ ನಿವೇಶನದ ಪತ್ರದಲ್ಲಿ ನನ್ನ ಗಂಡನ ಹೆಸರು ಫಯಾಜ್ ಅಹಮ್ಮದ್ ಎಂಬ ಹೆಸರು ನಮೂದಾಗಿದೆ. ಸದರಿ ನಿವೇಶನದಲ್ಲಿ ನನ್ನ ಪತಿ ಹೆಸರು ಬೇರೆಯವರ ಹೆಸರು ನಮೂದಾಗಿದೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ಯಾವಾಗ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು *3* ವರ್ಷಗಳ ಹಿಂದೆ ತೊಂದರೆ ಕೊಟ್ಟಿರುತ್ತಾರೆ ಎಂದು ಸಾಕ್ಷಿಯು ಸಾಕ್ಷ್ಯ ನುಡಿಯುತ್ತಾರೆ. ನನ್ನ ಮತ್ತು ನನ್ನ ಮೂರುಮಕ್ಕಳ ಜವಬ್ದಾರಿಯನ್ನು ಎದುರುದಾರರು ವಹಿಸಿಕೊಳ್ಳಲು ತಯಾರಿದ್ದರೂ ಸಹ ನಾನು ಅವರ ಜೊತೆ ಹೋಗಲು ತಯಾರಿಲ್ಲ ಎಂದರೆ ಸರಿ. ಎದುರುದಾರರು ಇನ್ನೊಬ್ಬ ಹೆಂಗಸಿನ ಜೊತೆ ಅನೈತಿಕ ಸಂಬಂಧ ಇಟ್ಟು ಕೊಂಡ ಬಗ್ಗೆ ನಾನು ದಾಖಲಾತಿಗಳನ್ನು ಒದಗಿಸಿದ್ದೇನೆ ಎಂದರೆ ಸರಿ . ಎದುರುದಾರರು ಇನ್ನೊಬ್ಬ ಹೆಂಗಸಿನ ಜೊತೆ ಅನೈತಿಕ ಸಂಬಂಧ ಇಟ್ಟು ಕೊಂಡ ಬಗ್ಗೆ ನಾನು ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪದೇ ಪದೇ ನನ್ನ ತವರು ಮನೆಗೆ ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತವರು ಮನೆಗೆ ಹೋದ ನಂತರ ಎಂದರುದಾರರನ್ನು ಸಹ ನನ್ನ ತವರು ಮನೆಯಲ್ಲಿ ಬಂದು ಇರುವಂತೆ ಹೇಳಿದ್ದೇನು ಅದರಂತೆ ಆತನ ತನ್ನ ತವರು ಮನೆಯಲ್ಲಿ ಬಂದು ಇದ್ದಾರೆ ಎಂದರೆ ಸರಿಯಲ್ಲ.

ಎದುರುದಾರರು ನಮ್ಮ ತವರು ಮನೆಯಲ್ಲಿ ನನ್ನ ಜೊತೆ ವಾಸವಾಗಿದ್ದ ಸಂದರ್ಭದಲ್ಲಿ ನಾನು , ನನ್ನ ತಂದೆ, ಹಾಗೂ ನನ್ನ ಚಿಕ್ಕಪ್ಪ ಎದುರುದಾರರ ಮೇಲೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಾವು ಎದುರುದಾರರನ್ನು ನಮ್ಮ ತವರು ಮನೆಯಿಂದ ಹೊರ ಹಾಕಿದ ನಂತರ ಅವರು ಈಗ ಸಣ್ಣ ಪಂಚರ್ ಶಾಪ್ ಅನ್ನು ಇಟ್ಟು ಜೀವನ ನೆಡೆಸುತ್ತಿದ್ದಾರೆ ಸಾಕ್ಷಿಯು ದೊಡ್ಡ ಪಂಚರ್ ಅಂಗಡಿಯನ್ನು ಇಟ್ಟುಕೊಂಡು ವ್ಯವಹಾರವನ್ನು ಮಾಡುತ್ತಿದ್ದಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಎದುರುದಾರರ ಪಂಚರ್ ಅಂಗಡಿಯ ಬಳಿ ಹೋಗಿ ಆತನಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನಗೆ ವರದಕ್ಷಿಣ ಹಣ ತರುವಂತೆ ಪೀಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಗೆ ಹುಷಾರಿಲ್ಲ ಎಂದರೆ ಸರಿ . ನನ್ನ ತಾಯಿಯ ಎಲ್ಲಾ ವೈದ್ಯ ಖರ್ಚುಗಳನ್ನು ಎದುರುದಾರು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ನನಗೆಯಾವುದೇ ರೀತಿಯ ದೈಹಿಕ ಹಿಂಸೆ ಕೊಡದಿದ್ದರು ಸಹ ನಾನು ಆತನ ವಿರುದ್ದ ಸುಳ್ಳು ದೂರನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ . ನಾನು ಸಂಘದಲ್ಲಿ ಸಾಲಾ ಮಾಡಿ ಎದರುದಾರರಿಗೆ ಕೊಟ್ಟಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ. ಎದುರುದಾರರಿಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನ ಜೊತೆ ಇದ್ದ ಸಂದರ್ಭದಲ್ಲಿ ನನ್ನ ಮತ್ತು ನನ್ನ ಮಕ್ಕಳ ಎಲ್ಲಾ ಜೀವನಾಂಶ ಭರಿಸುತ್ತಿದ್ದರು ಎಂದರೆ ಸರಿಯಲ್ಲ. ತಾವು ಈ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಎದುರುದಾರರು ಭರಿಸಲು ಆತನಿಗೆ ಆರ್ಥಿಕ ಶಕ್ತಿ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u> : ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

*ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***